ಒಂದು ಎಡವಟ್ಟಿನ ನಂತರ ಇನ್ನೊಂದು ಅದರ ನಂತರ ಮತ್ತೊಂದು ಮಗದೊಂದು ನೂರಾ ಒಂದು....

ನಾನು ಈ ಸಾಕುಂತಲೆಯನ್ನು ಮದುವೆಯಾಗಿದ್ದೂ ಅಂತಹ ದೊಡ್ಡ ಎಡವಟ್ಟೊಂದರ ಆರಂಭವಾಗಿತ್ತು.

* * *

ಈ ಮರಿ ಸಾಕುಂತಲೆ ಬೇಲೂರ ಆ ಶಿಲಾಬಾಲಿಕೆ ಶಾಕುಂತಲೆಗಿಂತ ಚಂದವಿದ್ದಾಳೆ ಎಂದುಕೊಂಡು ಕಾಡಿಬೇಡಿ ಮದುವೆಯಾಗಿದ್ದೆ. ಸರಗೂರಿನಿಂದ ಕಾಲೇಜಿಗೆ ಓಡಾಡಲು ಬಸ್ಸು ಪಾಸಿಗೆ ಪಾಸ್ ಪೋರ್ಟ್ ಸೈಜಿನ ಫೋಟೊ ತೆಗೆಸಿಕೊಳ್ಳಲು ಬಂದವಳು ಅಷ್ಟು ಅಗಲ ಬಾಯಿ ತೆರೆದುಕೊಂಡು ಕಣ್ಣಿನಲ್ಲೇ ಕೊಲ್ಲುವಂತೆ ನೋಡಿದಾಗ ಇರಲಿ ಸುಮ್ಮನೆ ಎಂದು ಆ ಕೊಲ್ಲುವ ಕಣ್ಣುಗಳನ್ನು ಕ್ಲಿಕ್ಕಿಸಿದ್ದೆ. ಆಮೇಲೆ ಅವಳ ಅಗಲವಾದ ಬಾಯನ್ನು ಮುಚ್ಚಲು ಹೇಳಿ, ಕಣ್ಣು ಅಷ್ಟು ಬಿಡಬೇಡಮ್ಮಾ ಎಂದು ಸರಿಮಾಡಿ ಸರಿಯಾದ ಇನ್ನೊಂದನ್ನು ಕ್ಲಿಕ್ಕಿಸಿದ್ದೆ. ವರುಷ ಕಳೆದು ಹೊಸ ಪಾಸಿಗೆ ಮತ್ತೆ ಅದನ್ನೇ ಪ್ರಿಂಟು ಮಾಡಿಕೊಡಿ ಎಂದು ಕೇಳಿಕೊಂಡು ಬಂದಿದ್ದಳು ಜಿಪುಣಿ. ‘ಹಳೆಯದು ಬೇಡ ಮರೀ. ಈಗ ನೀನು ಇನ್ನೂ ಬೇರೆ ಕಾಣುತ್ತಿರುವೆ’ ಎಂದು ಕಾಸು ಇಸಕೊಳ್ಳದೇ ಹೊಸತಾಗಿ ತೆಗೆದು ಪ್ರಿಂಟು ಕೊಟ್ಟು ಕಳಿಸಿದ್ದೆ. ಡಿಗ್ರಿ ಮುಗಿಸಿದವಳು, ‘ಅಂಕಲ್ ನನಗೂ ಫೋಟೊ ಹಿಡಿಯುವುದು ಹೇಳಿಕೊಡುತ್ತೀರಾ’ ಎಂದು ದೊಡ್ಡ ಕಣ್ಣು ಮಾಡಿ ಕೇಳಿದ್ದಳು.

ನಾನು ಅವಳ ಅಷ್ಟು ದೊಡ್ಡ ಎದೆಯೊಳಗೆ ಕಳೆದುಹೋಗಿದ್ದೆ. ಫೋಟೊ ಹಿಡಿಯಲು ಹೇಳಿ ಕೊಟ್ಟಿದ್ದೆ. ಶಾಲೆಯಲ್ಲಿ ಹೆಸರು ಬರೆಸುವಾಗ ಅಪ್ಪ, ‘ಶಾಕುಂತಲೆ ಬೇಡಾ ಸಾ. ಸಾಕುಂತಲೆ ಅಂತಲೇ ಬರೆಯಿರಿ ಎಂದು ಹಾಗೇ ಬರೆಸಿದ್ದರಂತೆ. ಹಾಗಾಗಿ ಸಾಲು ಸಾಲು ಹೆಣ್ಣುಮಕ್ಕಳಲ್ಲಿ ಇವಳೇ ಕೊನೆಯವಳು. ಬೆರಳು ಕೊಟ್ಟರೆ ಹಸ್ತವನ್ನೇ ನುಂಗುವ ಸಾಕುಂತಲೆ ಎರಡೇ ವರ್ಷದಲ್ಲಿ ಎಲ್ಲವನ್ನೂ ಕಲಿತುಕೊಂಡು ಕಣ್ಣು ಅಗಲಿಸಿ ರೋಪು ಹಾಕಿ ನನ್ನನ್ನೇ ಮದುವೆ ಮಾಡಿಸಿಕೊಂಡು ಸ್ಟುಡಿಯೋದ ಗಲ್ಲಾದಲ್ಲಿ ಸ್ಥಾಪಿತಳಾಗಿದ್ದಳು. ಒಂಟಿ ಪಿಶಾಚಿಯಾಗಿದ್ದ ನನ್ನ ಜೀವನದಲ್ಲಿ ಏನಾಗುತ್ತಿದೆ ಎಂದು ಅರಿವಾಗುವ ಮೊದಲೇ ಸಂಸಾರಿಯಾಗಿದ್ದೆ. ಸಂಸಾರ ಏನೆಂದು ಅರಿವಾಗುವ ಮೊದಲೇ ಒಂಟಿ ಪಿಶಾಚಿಯಂತೆ ಈ ಹಳೆಯ ಡೀಸೆಲ್ ಬುಲ್ಲೆಟ್ ಏರಿ ಪತ್ರಿಕಾ ಫೋಟೊಗ್ರಾಫರನಾಗಿದ್ದೆ. ಸಾಕುಂತಲೆ ನನ್ನ ಸ್ಟುಡಿಯೋದ ಮಾಲೀಕಳಾಗಿದ್ದಳು. ಹೋದಲ್ಲಿ ಬಂದಲ್ಲಿ ನನ್ನ ಮಾನ ಕಳೆಯುವ ಒಂದು ಹವ್ಯಾಸ ಬಿಟ್ಟರೆ ಮತ್ತು ಆಗಾಗ ನನ್ನ ಮುಸುಡಿಗೆ ಬಾರಿಸುವ ಚಟ ಬಿಟ್ಟರೆ ಬೇರೆಲ್ಲದರಲ್ಲೂ ಆಕೆ ದೇವತೆಯೇ ಆಗಿದ್ದಳು.

‘ಅದು ಎಂತ ನೋಡ್ತೀಯಾ ಮೂದೇವಿ. ಅದು ಮಗುವಿಗೆ ಹಾಲು ಕೊಡೋದು. ಮೊದಲು ಮಗು ಮಾಡು’ ಎಂದು ದಬಾಯಿಸುತ್ತಿದ್ದಳು. ಸೇರಲು ಬಿಟ್ಟರೆ ತಾನೇ ಮಕ್ಕಳಾಗುವುದು. ಅದು ಗೊತ್ತಿದ್ದೂ ಹಿಗ್ಗಾಮುಗ್ಗ ಮುಸುಡಿಗೆ ಬಾರಿಸುತ್ತಿದ್ದಳು. ನೀನು ಗಂಡಸಾ ಎಂದು ಮೂದಲಿಸುತ್ತಿದ್ದಳು.

ಹೀಗೆ ಆದಾಗಲೇ ನಾನು ನಿದ್ದೆಯಲ್ಲಿ ಬೈಕು ಏರಿ ನಡು ಇರುಳಲ್ಲೂ ಓಡಿಸಲು ಶುರುವಾಗಿದ್ದು.

* * *

ಬೈಕು ಆಣತಿ ಪಡೆದುಕೊಂಡಂತೆ ಎಲ್ಲಿಗೆ ತಲುಪಬೇಕೋ ಆ ದಾರಿಯಲ್ಲಿ ಸಾಗುತ್ತಿತ್ತು. ಅಗ್ರಹಾರ ಕಳೆದು ಅರಮನೆ ಮುಗಿದು ಬಸ್ಸು ನಿಲ್ದಾಣ ತಲುಪಿ ಬನ್ನಿ ಮಂಟಪ ತಲುಪಿದಂತೆ ಹಿತಕರವಾದ, ಆತ್ಮೀಯವಾದ, ಐತಿಹಾಸಿಕವಾದ, ಚಿರಪರಿಚಿತ ಆನೆಲದ್ದಿಯ ಪರಿಮಳ ಮೂಗಿಗೆ ಬಡಿದಾಗ ನನಗೆ ಎಚ್ಚರವಾಯಿತು. ತಾಲೀಮು ಮುಗಿಸಿ ವಾಪಾಸಾಗುತ್ತಿರುವ ದರಬಾರು ಆನೆಗಳು ವಯಸ್ಸಾದ ಸ್ಥೂಲ ಕಾಯದ ಗೌರವಾನ್ವಿತ ಮಹಿಳೆಯರಂತೆ ರಾಜ ಗಾಂಭೀರ್ಯದಲ್ಲಿ ವಾಪಾಸು ಹೋಗುತ್ತಿದ್ದವು.

ಗಜಪಡೆಯ ಹಿಂದೆ ಸಾಗುತ್ತಿರುವ ಅರಣ್ಯ ಇಲಾಖೆಯ ಅದೇ ಹಳೆಯ ಜೀಪಿನ ಮುಂದೆ ಲದ್ದಿ ಸಂಗ್ರಹಿಸುತ್ತ ಸಾಗುತ್ತಿರುವ ಬಳ್ಳೆ ಕಾಡಿನ ಜೇನುಕುರುಬರ ಅಣ್ಣಯ್ಯ. ‘ ಸಾ... ನಮಸ್ಕಾರ’ ಗವಸಿನ ಮೇಲೆ ಮೆತ್ತಿಕೊಂಡಿರುವ ಲದ್ದಿಯ ಸಮೇತ ಕೈಯೆತ್ತಿ ತನ್ನ ವಸಡಿನ ಜೊತೆ ಅಷ್ಟೂ ಹುಳುಕು ಹಲ್ಲುಗಳನ್ನು ಪ್ರದರ್ಶಿಸಿ ಕೈ ಮುಗಿದ.

ಬಳ್ಳೆ ಕಾಡಿನ ಹುತ್ತಜೇನಿನ ತಜ್ಞ ಅಣ್ಣಯ್ಯ ಅರಣ್ಯ ಇಲಾಖೆಯ ಅರೆಕಾಲಿಕ ಸ್ಪೆಷಲ್ ಕಾವಡಿ. ಕಾಡಿನಲ್ಲಿರುವಾಗ ಮುಗಿಲಿಗೆ ಗೋಣೆತ್ತಿ ಗಾಳಿಯಲಿ ತೇಲಿ ಬರುವ ಜೇನಿನ ಪರಿಮಳ ನಾಸಿಕದಿಂದ ಆಘ್ರಾಣಿಸುತ್ತಾ ಕಣ್ಮುಚ್ಚಿಕೊಂಡು ಹುತ್ತದಿಂದ